ಗೌರಿಬಿದನೂರು ಪಟ್ಟಣದಲ್ಲಿ ಕರ್ನಾಟಕ ಗೃಹ ಮಂಡಳಿಯ ಮತಿಯಿಂದ ಮನೆಗಳ ನಿರ್ಮಾಣ

23 (207): ಶ್ರೀ ಶಿವಶಂಕರ್ ರೆಡ್ಡಿ ಎನ್. ಹೆಚ್. (ಗೌರಿಬಿದನೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೌರಿಬಿದನೂರು ಪಟ್ಟಣದಲ್ಲಿ ಗೃಹ ನಿರ್ಮಾಣ ಯೋಜನೆಯಡಿಯಲ್ಲಿ ಕಡಿಮೆ ಆದಾಯ ಇರುವಂತಹ ಬಡವರಿಗೆ ಮನೆಗಳ ನಿರ್ಮಾಣ ಮಾಡಿಕೊಡಲು ಅವಕಾಶ ಇಲ್ಲವೇ:

ಆ) ಈ ನಿರ್ಮಾಣಕ್ಕೆ ಸಂಬಂಧಪಟ್ಟಂತಹ ಜಮೀನು ಪುರಸಭೆಯು ಮಂಜೂರು ಮಾಡಲು ಸಿದ್ದವಿದ್ದರೆ 1000 ಮನೆಗಳನ್ನು ನಿರ್ಮಾಣ ಮಾಡಲು ಸರ್ಕಾರ ಸಿದ್ಧವಿದೆಯೇ:

ಇ) ಈ ಸಂಬಂಧವಾಗಿ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಅವಕಾಶವಿದೆ.

ಆ) ವಸತಿ ಯೋಜನೆಗೆ ಪುರಸಭೆಯಿಂದ ಸೂಕ್ತ ಜಮೀನು ಒದಗಿಸಿದಲ್ಲಿ ಬೇಡಿಕೆಯನ್ನಾಧರಿಸಿ ವಸತಿ ಯೋಜನೆಯನ್ನು ಕೈಗೊಳ್ಳಬಹುದಾಗಿದೆ.

ಇ) ಗೌರಿಬಿದನೂರು ಪಟ್ಟಣದಲ್ಲಿ ವಸತಿಗಿರುವ ಬೇಡಿಕೆಯನ್ನು ಪರಿಶೀಲಿಸಲು ಬೇಡಿಕೆ ಸಮೀಕ್ಷೆಯನ್ನು ಕೈಗೊಳ್ಳಲಾಗುವುದು.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ : ಮಾನ್ಯ ಸಭಾಧ್ಯಕ್ಷರೆ, ಗೌರಿಬಿದನೂರು ಪಟ್ಟಣದಲ್ಲಿ ಸುಮಾರು 2500 ನಿವೇಶನಗಳು ಮತ್ತು ಮನೆಗಳಿಗೆ ಬಹಳ ಬೇಡಿಕೆ ಇದೆ. ಸ್ಲಂ ಬೋರ್ಡಿನಿಂದ ಈಗಾಗಲೇ ಸುಮಾರು 200 ಮನೆಗಳನ್ನು ಕಟ್ಟಿದ್ದಾರೆ. ಇನ್ನು ಸುಮಾರು 2000 ಮನೆಗಳ ಅಗತ್ಯ ಅಲ್ಲಿ ಇದೆ. ಬಹಳಷ್ಟು ಬೇಡಿಕೆ ಇದೆ. ದಯಮಾಡಿ ಈಗ ಏಳು ಎಕರೆ ಜಮೀನು ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಆದಷ್ಟು ಹೆಚ್ಚಿನ ಮನೆಗಳನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

† **ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು)** : ಮಾನ್ಯ ಸಭಾಧ್ಯಕ್ಷರೆ, ಗೌರಿಬಿದನೂರಿನಲ್ಲಿ ಮಾತ್ರವಲ್ಲ, ಇಡೀ ಕರ್ನಾಟಕದಲ್ಲಿ ಎಷ್ಟು ಮನೆಗಳು ಬೇಕೆನ್ನುವ ಬಗ್ಗೆ ಬೇಡಿಕೆ ಸಮೀಕ್ಷೆಯನ್ನು ನಾವು ಮಾಡಿಸುತ್ತಿದ್ದೇವೆ. ಅದೇ ರೀತಿ ಗೌರಿಬಿದನೂರಿಗೂ ಕೂಡ ಬರುತ್ತದೆ. ಆ ಸಂದರ್ಭದಲ್ಲಿ ನೀವು ಜಾಗ ಕೊಡಿಸುವುದಾದರೆ ಎಷ್ಟೇ ಮನೆಗಳನ್ನು ಕಟ್ಟಿ ಕೊಡುವುದಕ್ಕೂ ಕೂಡ ಸರ್ಕಾರ ಬದ್ಧವಾಗಿದೆ. ಆದರೆ ಜಾಗವನ್ನು ಕೊಡಿಸತಕ್ಕಂಥ ಜವಾಬ್ದಾರಿಯನ್ನು ನೀವು ತೆಗೆದುಕೊಳ್ಳಬೇಕು.

---

† ಈ ನಡವಳಿಕೆಯು ಮಾನ್ಯ ಸಚಿವರಿಂದ ಪರಿಶೀಲಿಸಲ್ಪಟ್ಟಿದೆ.